ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಸ್ವಚ್ಛತಾವಾಣಿ

## ವಾರ್ತಾಪತ್ರ

ಕೊರೋನಾ ವೈರಸ್ (ಕೋವಿಡ್-19) ಇಂದು ಜಗತ್ತಿನೆಲ್ಲೆಡೆ ಹರಡುತ್ತಿರುವ ವೈರಾಣು. ಮೊಟ್ಟ ಮೊದಲ ಕೊರೋನಾ ಸೋಂಕಿನ ಪ್ರಕರಣ ಚೀನಾದ ವುಹಾನ್ ನಗರದಲ್ಲಿ ವರದಿಯಾಯಿತು. ಈ ಸೋಂಕು ವ್ಯಾಪಕವಾಗಿ ಹರಡಲಾರಂಭಿಸಿದಂತೆ 11 ಮಾರ್ಚ್ 2020 ರಂದು ವಿಶ್ವ ಆರೋಗ್ಯ ಸಂಸ್ಥೆಯು ಇದನ್ನು ಸಾಂಕ್ರಾಮಿಕವಾಗುವ (Pandemic) ಸೋಂಕು ಎಂದು ಘೋಷಿಸಿ ಪ್ರತಿ ದೇಶಗಳಿಗೂ ಈ ಬಗ್ಗೆ ಮಾಹಿತಿ ನೀಡಿ ಇದನ್ನು ತಡೆಯುವ ನಿಟ್ಟಿನಲ್ಲಿ ಸಜ್ಜಾಗಬೇಕೆಂಬ ಕರೆ ನೀಡಿತು.



ಈ ನಿಟ್ಟಿನಲ್ಲಿ ದೇಶದಾದ್ಯಂತ ಕೋವಿಡ್-19 ಕುರಿತಾದ ಜಾಗೃತಿ ಮೂಡಿಸಲಾಗುತ್ತಿದೆ. ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಲಾಕ್‌ಡೌನ್ ಘೋಷಿಸಲಾಗಿದೆ. ಈ ಸಮಯದಲ್ಲಿ ಸಂಕಷ್ಟಕ್ಕೊಳಗಾದ ದುರ್ಬಲವರ್ಗದವರಿಗೆ ಸರ್ಕಾರದ ವತಿಯಿಂದ ಊಟ ವಸತಿ ಸೇರಿದಂತೆ ಅನೇಕ ರೀತಿಯ ನೆರವು ನೀಡಲಾಗುತ್ತಿದೆ.

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ಕರ್ನಾಟಕದ ಜನತೆಯಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ವಾಟ್ಸಪ್ ಸಹಾಯವೇದಿಕೆಯನ್ನು ಆರಂಭಿಸಿದೆ.

- ಕೋವಿಡ್-19 ಎಂದರೇನು?, ಅದು ಹೇಗೆ ಹರಡುತ್ತದೆ?
- ನಾವು ಹೇಗೆ ಸುರಕ್ಷಿತವಾಗಿರಬಹುದು?
- ನಾವು ಎಲ್ಲಿ ಸಹಾಯ ಪಡೆಯಬಹುದು?
- ನಾವು ಹೇಗೆ ಇತರರಿಗೆ ಸಹಾಯ ಮಾಡಬಹುದು?

ಮುಂತಾದ ಹಲವು ಸಂದೇಹಗಳನ್ನು ಪರಿಹರಿಸಿಕೊಳ್ಳಲು ಈ ವೇದಿಕೆಯು ಸಹಾಯ ಮಾಡುತ್ತದೆ. ನೀವು ಮಾಡಬೇಕಾದುದಿಷ್ಟೇ.
87509 71717 ಸಂಖ್ಯೆಯನ್ನು ಸೇವ್ ಮಾಡಿ ವಾಟ್ಸಪ್ ನಲ್ಲಿ 'Hi' ಎಂದು ಸಂದೇಶ ಕಳುಹಿಸಿ.
ಸರಿಯಾದ ಮಾಹಿತಿ ಪಡೆಯಿರಿ. ಸುರಕ್ಷಿತವಾಗಿರಿ.

ಗ್ರಾಮೀಣ ಜನತೆಯಲ್ಲಿ ಅರಿವು ಮೂಡಿಸಿ ಅವರನ್ನು ಸೋಂಕಿನಿಂದ ಸುರಕ್ಷಿತವಾಗಿಡಲು ಗ್ರಾಮೀಣ ಕಾರ್ಯಪಡೆಗಳನ್ನು ರಚಿಸಿದ್ದು ಅವರಿಗೆ ಅವಶ್ಯಕವಾದ ಎಲ್ಲ ತರಬೇತಿಗಳನ್ನು ನೀಡಲಾಗಿದೆ. ಈ ವಿಶೇಷ ಗ್ರಾಮೀಣ ಕಾರ್ಯಪಡೆಗಳು ಆಯಾ ಗ್ರಾ.ಪಂ ಗಳ ಅಧ್ಯಕ್ಷರ ನೇತೃತ್ವದಲ್ಲಿ ಕಾರ್ಯ ನಿರ್ವಹಿಸಲಿದೆ.

ಗ್ರಾಮ ವಿಶೇಷ ಕಾರ್ಯ ಪಡೆಯು ಆಯಾ ಗ್ರಾಮಗಳ ಉಪಾಧ್ಯಕ್ಷ, ಒಬ್ಬ ಗ್ರಾ.ಪಂ ಸದಸ್ಯ, ಗ್ರಾಮ ಲೆಕ್ಕಿಗ, ಗ್ರಾಮದ ಬೀಟ್ ಪೋಲೀಸ್, ಸ್ಥಳೀಯ ಆರೋಗ್ಯ ಇಲಾಖೆಯ ಅಧಿಕಾರಿಗಳು, ಆಶಾ ಅಂಗನವಾಡಿ ಕಾರ್ಯಕರ್ತರು, ನೊಂದಾಯಿಸಲ್ಪಟ್ಟ ಸ್ಥಳೀಯ ವೈದ್ಯರುಗಳನ್ನು ಹೊಂದಿದ್ದು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಕಾರ್ಯಪಡೆಯ ಕಾರ್ಯದರ್ಶಿಯಾಗಿರುತ್ತಾರೆ. ಈ ಕಾರ್ಯಪಡೆಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು ನಿತ್ಯ ಇದನ್ನು ಇಲಾಖೆಯು ರಾಜ್ಯಮಟ್ಟದಲ್ಲಿ ಪರಿವೀಕ್ಷಣೆ ಮಾಡುತ್ತಿದೆ.

ಗ್ರಾಮೀಣ ಕಾರ್ಯಪಡೆಯು ಕೋವಿಡ್-19 ಸೋಂಕು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳುತ್ತದೆ. ಅವರ ಮುಖ್ಯ ಕಾರ್ಯಗಳೆಂದರೆ;

- ಗ್ರಾಮದಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು.
- ಗ್ರಾಮಗಳೊಳಗೆ ಯಾವುದೇ ರೀತಿಯ ಸುಳ್ಳು ಸುದ್ದಿಗಳು ಹರಡದಂತೆ ನೋಡಿಕೊಳ್ಳುವುದು.
- 65 ವರ್ಷ ಮೇಲ್ಪಟ್ಟ ಹಿರಿಯರ ಆರೋಗ್ಯದೆಡೆ ಸರಿಯಾದ ಗಮನ ನೀಡುವುದು.
- ತುರ್ತು ಪರಿಸ್ಥಿತಿಗಳಲ್ಲಿ ಗರ್ಭಿಣಿಯರ, ಬಾಣಂತಿಯರ ಹಾಗೂ ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದಂತೆ ಹತ್ತಿರದ ಆಸ್ಪತ್ರೆಗಳಲ್ಲಿ ಚಿಕಿತ್ಸೆಯ ಸೌಕರ್ಯ ಮಾಡಿಕೊಡುವುದು.
- ಹೊರಗಿನಿಂದ ಗ್ರಾಮಕ್ಕೆ ಬರುವವರನ್ನು ಕಡ್ಡಾಯವಾಗಿ ಆರೋಗ್ಯ ತಪಾಸಣೆಗೊಳಪಡಿಸಿ ಅವರನ್ನು 14 ದಿನಗಳ ಕಾಲ ಕ್ವಾರಂಟೈನ್‌ನಲ್ಲಿ ಇರಿಸುವುದು.
- ಗ್ರಾಮಗಳಲ್ಲಿ ಸ್ವಚ್ಛತೆ ಕಾಯ್ದುಕೊಳ್ಳುವುದು ಹಾಗೂ ಸ್ಯಾನಿಟೈಸ್ ಮಾಡಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳುವುದು.



ಸ್ವಚ್ಛತೆ ಹಾಗೂ ಸಾಮಾಜಿಕ ಅಂತರ ಕೋವಿಡ್-19 ಸೋಂಕಿನಿಂದ ನಮ್ಮನ್ನು ದೂರವಿರಿಸಬಲ್ಲದು. ಕೋವಿಡ್-19 ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಲಾಕ್ ಡೌನ್ ಅವಧಿಯನ್ನು ವಿಸ್ತರಿಸಲಾಗಿದೆ. ಈ ಸಮಯದಲ್ಲಿ ಪ್ರತಿಯೊಬ್ಬರೂ ಜವಾಬ್ದಾರಿಯುತರಾಗಿರುವುದು ಅವಶ್ಯಕ. ಇದು ಸಾಂಕ್ರಾಮಿಕ ರೋಗ ಹರಡುತ್ತಿರುವ ಸಂದರ್ಭವಾದರೂ ಭವಿಷ್ಯದ ದೃಷ್ಟಿಯಿಂದ ಸ್ವಚ್ಛತೆ ಹಾಗೂ ಜಲ ಸಂರಕ್ಷಣೆಯ ಕುರಿತೂ ನಾವು ಯೋಚಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಾವು ಗಮನ ನೀಡಬೇಕಾದ ಅಂಶಗಳೆಂದರೆ;

- ಮನೆಯಲ್ಲಿಯೇ ಇರುವುದು.
- ಅಗತ್ಯ ವಸ್ತುಗಳಿಗಾಗಿ ಹೊರಗೆ ಹೋದಾಗ ಇತರರಿಂದ ಕನಿಷ್ಟ ಒಂದು ಮೀ. ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು.
- ಆಗಾಗ್ಗೆ ಕೈತೊಳೆಯುವುದು, ಹಾಗೂ ಮರೆಯದೇ ನಲ್ಲಿಯನ್ನು ನಿಲ್ಲಿಸುವುದು.
- ಸರಿಯಾದ ರೀತಿಯಲ್ಲಿ ಕಸ ವಿಂಗಡಿಸಿ ವಿಲೇವಾರಿ ಮಾಡುವುದು.
- ಅಗತ್ಯ ಸ್ಥಳಗಳಾದ ನೀರಿನ ಘಟಕಗಳು, ನೀರಿನ ಮೂಲಗಳು, ಸಮುದಾಯ ಶೌಚಾಲಯಗಳು ಮುಂತಾದ ಸ್ಥಳಗಳಲ್ಲಿ ಸ್ವಚ್ಛತೆ ಕಾಯ್ದುಕೊಳ್ಳುವುದು ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು.
- ಕ್ವಾರಂಟೈನ್ ಆಗಿರುವ ಮನೆಗಳಿಂದ, ಕಸವನ್ನು ಪ್ರತ್ಯೇಕವಾಗಿ ನೀಡುವುದು ಹಾಗೂ ಕಸ ವಿಲೇವಾರಿ ಮಾಡುವ ಸಮಯದಲ್ಲಿ ಮಾಸ್ಕ್ ಧರಿಸಿ ಇತರರನ್ನು ಮುಟ್ಟದೇ ಕನಿಷ್ಟ ಒಂದು ಮೀ. ಅಂತರದಿಂದಲೇ ವ್ಯವಹರಿಸುವುದು.
- ಕೋವಿಡ್-19 ಕುರಿತು ಮಾಹಿತಿ ಹಾಗೂ ನೆರವಿಗಾಗಿ ಸಹಾಯವಾಣಿಗಳನ್ನು ಸಂಪರ್ಕಿಸುವುದು.




**ನಮ್ಮ ಸುರಕ್ಷತೆ ಈಗ ನಮ್ಮ ಕೈಯಲ್ಲಿದೆ. ಜಾಗೃತರಾಗೋಣ. ಸುರಕ್ಷಿತವಾಗಿರೋಣ.**